# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 893 |
| ಉತ್ತರಿಸಬೇಕಾದ ದಿನಾಂಕ | : | 13.12.2023 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಪಶುಸಂಗೋಪನೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಪ್ರಸ್ತುತ ರಾಜ್ಯದಲ್ಲಿ ಜಾರಿಯಲ್ಲಿರುವ ಪ್ರೋತ್ಸಾಹದಾಯಕ ಕಾರ್ಯಕ್ರಮಗಳು ಯಾವುವು; | 2023-24ನೇ ಸಾಲಿನಲ್ಲಿ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯಿಂದ ಪಶು ಸಂಗೋಪನೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಜಾರಿಯಲ್ಲಿರುವ ಪ್ರೋತ್ಸಾಹದಾಯಕ ಕಾರ್ಯಕ್ರಮಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ | ಕಳೆದ ಐದು ವರ್ಷಗಳಲ್ಲಿ ಪಶುಸಂಗೋಪನಾ ಇಲಾಖೆಯ ಕಾರ್ಯಕ್ರಮಗಳಿಗೆ ಹಂಚಿಕೆಯಾದ ಮತ್ತು ಖರ್ಚಾದ ಅನುದಾನವೆಷ್ಟು; (ಕಳೆದ ಐದು ವರ್ಷಗಳ ಮಾಹಿತಿಯನ್ನು ಜಿಲ್ಲಾವಾರು ಪ್ರತ್ಯೇಕವಾಗಿ ನೀಡುವುದು) | ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯಿಂದ ಕಳೆದ ಐದು ವರ್ಷಗಳಲ್ಲಿ ಕಾರ್ಯಕ್ರಮಗಳಿಗೆ ಹಂಚಿಕೆಯಾದ ಮತ್ತು ಖರ್ಚಾದ ಅನುದಾನದ ಜಿಲ್ಲಾವಾರು ವಿವರಗಳನ್ನು **ಅನುಬಂಧ-2 ರಲ್ಲಿ** ನೀಡಲಾಗಿದೆ. |
| ಇ | ಪಶು-ಭಾಗ್ಯ ಯೋಜನೆಯ ಫಲಾನುಭವಿಗಳ ಆಯ್ಕೆಗೆ ನಿಗದಿಪಡಿಸಿರುವ ಮಾನದಂಡಗಳೇನು; ಇದುವರೆಗೆ ಪಶುಭಾಗ್ಯ ಯೋಜನೆಗೆ ಆಯ್ಕೆಯಾದ ಫಲಾನುಭವಿಗಳು ಎಷ್ಟು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) | 2021-22ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 121 ಪಪಾಯೋ 2021, ದಿನಾಂಕ: 14-09-2021 ರಂತೆ ಪಶುಭಾಗ್ಯ ಯೋಜನೆಯನ್ನು ಮುಖ್ಯಮಂತ್ರಿಗಳ ಅಮೃತ ಜೀವನ ಯೋಜನೆಯೆಂದು ಅನುಷ್ಠಾನಗೊಳಿಸಲು ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ **(ಪ್ರತಿ ಲಗತ್ತಿಸಿದೆ).**<br><br>ಪಶುಭಾಗ್ಯ / ಮುಖ್ಯಮಂತ್ರಿಗಳ ಅಮೃತ ಜೀವನ ಯೋಜನೆಯಡಿಯಲ್ಲಿ ಇದುವರೆಗೆ ಆಯ್ಕೆಯಾದ ಫಲಾನುಭವಿಗಳ ಜಿಲ್ಲಾವಾರು ವಿವರವನ್ನು **ಅನುಬಂಧ-3 ರಲ್ಲಿ** ನೀಡಲಾಗಿದೆ. |
| ಈ | ಚೈನಾ ಸಿಲ್ಕ್ ಕೊಳ್ಳುವಿಕೆಯ ಹೆಚ್ಚಳದಿಂದ ಅಂತರಾಷ್ಟ್ರೀಯ ಖ್ಯಾತಿಯ ಮೈಸೂರ್ ಸಿಲ್ಕ್ ಮಾರಾಟದ ವಹಿವಾಟು ಕನಿಷ್ಟ ರಾಷ್ಟ್ರೀಯ ಮಾರುಕಟ್ಟೆಯಲ್ಲಿ | ಚೈನಾ ದೇಶದಲ್ಲಿ ಕಚ್ಚಾ ರೇಷ್ಮೆ ಉತ್ಪಾದನೆ ಕುಂಠಿತಗೊಳ್ಳುತ್ತಿದ್ದು, ಚೈನಾ ಸಿಲ್ಕ್ ಬಳಕೆಯಿಂದಾಗಿ ಅಂತರಾಷ್ಟ್ರೀಯ ಖ್ಯಾತಿ ಹೊಂದಿರುವ ಮೈಸೂರು ಸಿಲ್ಕ್ ಮಾರಾಟದಲ್ಲಿ ಯಾವುದೇ ಕುಂಠಿತವಾಗಿರುವುದಿಲ್ಲ. |

<table>
<tr>
<td></td>
<td>ಕೂಡಾ ದಿನೇ ದಿನೇ ಕ್ಷೀಣಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td>
<td>ಕರ್ನಾಟಕದ ಮೈಸೂರು ಸಿಲ್ಕ್ ಸೀರೆ ಮತ್ತು ಇತರೆ ಉತ್ಪನ್ನಗಳಿಗೆ “Geographical Indication” ಹೊಂದಿದ್ದು, ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಇರುತ್ತದೆ. ಕೆ.ಎಸ್.ಐ.ಸಿ ಉದ್ಯಮದ ಕಳೆದ ಮೂರು ವರ್ಷಗಳ ವಹಿವಾಟು ವಿವರ ಕೆಳಕಂಡಂತಿದೆ.
<table>
<tr><th>ಕ್ರ.ಸಂ</th><th>ವರ್ಷ</th><th>ವಹಿವಾಟು<br>(ರೂ. ಲಕ್ಷಗಳಲ್ಲಿ)</th></tr>
<tr><td>1</td><td>2019-20</td><td>19,495.89</td></tr>
<tr><td>2</td><td>2020-21</td><td>15,359.98</td></tr>
<tr><td>3</td><td>2021-22</td><td>20,477.00</td></tr>
</table>
</td>
</tr>
<tr>
<td>ಉ</td>
<td>ರಾಜ್ಯದ ರೇಷ್ಮೆ ಬೆಳೆಗಾರರು ಮತ್ತು ಒಟ್ಟಾರೆ ವಹಿವಾಟಿನ ಸಮಸ್ಯೆಗಳಾವುವು ರಾಜ್ಯದಲ್ಲಿ ರೇಷ್ಮೆ ಬೆಳೆ ಕ್ಷೇತ್ರ ಇತ್ತೀಚೆಗೆ ಭಾರೀ ಪ್ರಮಾಣದಲ್ಲಿ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ರೇಷ್ಮೆ ಕೃಷಿ ಕ್ಷೇತ್ರ ವಿಸ್ತರಣೆಗಾಗಿ ಸರ್ಕಾರ ಕೈಗೊಂಡ ಪ್ರೋತ್ಸಾಹದಾಯಕ ಯೋಜನೆಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು)</td>
<td>ರೇಷ್ಮೆ ಬೆಳೆಗಾರರ ಗೂಡು ವಹಿವಾಟಿನ ಸಮಸ್ಯೆಯನ್ನು ಅರಿತು ರಾಜ್ಯ ಸರ್ಕಾರವು ರೇಷ್ಮೆ ಬೆಳೆಗಾರರು ಉತ್ಪಾದಿಸಿದ ಗೂಡು ವಹಿವಾಟಿಗಾಗಿ 24 ವಾಣಿಜ್ಯ ಮಾರುಕಟ್ಟೆ, 06 ದ್ವಿತಳಿ ಬಿತ್ತನೆ ಮಾರುಕಟ್ಟೆ ಮತ್ತು 10 ಮೈಸೂರು ಶುದ್ಧ ತಳಿ ರೇಷ್ಮೆ ಗೂಡಿನ ಮಾರುಕಟ್ಟೆಗಳು ಕಾರ್ಯನಿರ್ವಹಿಸುತ್ತಿದೆ.<br><br>
ರೇಷ್ಮೆ ಗೂಡು ಮಾರಾಟಕ್ಕಂದೇ ಸೀಮಿತವಾಗಿರುವ ವಾಣಿಜ್ಯ ಮಾರುಕಟ್ಟೆಗಳಲ್ಲಿ ರೇಷ್ಮೆ ಭಾಗೀದಾರರ ಅನುಕೂಲಕ್ಕಾಗಿ ಸುಸಜ್ಜಿತವಾಗಿ ಮಾರುಕಟ್ಟೆಗಳನ್ನು ನಿರ್ಮಿಸಿದ್ದು, ಪಾರದರ್ಶಕ ಮತ್ತು ಸ್ಪರ್ಧಾತ್ಮಕ ವಹಿವಾಟಿಗಾಗಿ ಇ-ಮಾರುಕಟ್ಟೆ ವ್ಯವಸ್ಥೆಯಲ್ಲಿ ಇ-ಬಿಡ್ಡಿಂಗ್, ಇ-ಹರಾಜು ಇ-ತೂಕ ಮತ್ತು ಇ-ಹಣ ಪಾವತಿಯನ್ನು ಅನುಷ್ಠಾನಗೊಳಿಸಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಶೌಚಾಲಯ, ಜಾಲರಿ, ಸಿಸಿಟಿವಿ ಮತ್ತು ಸೋಲಾರ್ ಪವರ್ ಮತ್ತು ಅವಶ್ಯಕ ಸಾಮಗ್ರಿಗಳನ್ನು ಒದಗಿಸಲಾಗುತ್ತಿದೆ.<br><br>
ರೈತರು ಬೆಳೆಯುವ ರೇಷ್ಮೆ ಬೆಳೆಯನ್ನು ಲಾಭದಾಯಕವಾಗಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ;<br><br>
1. ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಹುಳು ಸಾಕಾಣಿಕೆ ಕುರಿತಂತೆ ತಾಂತ್ರಿಕ ಮಾಹಿತಿಯನ್ನು ಒದಗಿಸಲಾಗುತ್ತಿದೆ.<br>
2. ರೇಷ್ಮೆ ಗೂಡಿಗೆ ಉತ್ತಮ ಮಾರುಕಟ್ಟೆ ಸೌಲಭ್ಯವನ್ನು ಒದಗಿಸುವ ಸಲುವಾಗಿ ಚನ್ನಪಟ್ಟಣ, ಶಿಡ್ಲಘಟ್ಟ, ಹಾವೇರಿ ಮತ್ತು ಕಲಬುರಗಿಯಲ್ಲಿ ಹೈಟೆಕ್ ಮಾರುಕಟ್ಟೆ ನಿರ್ಮಾಣ ಮಾಡಲು ಕ್ರಮಕೈಗೊಳ್ಳಲಾಗಿದೆ.<br>
3. ಹಿಪ್ಪುನೇರಳೆ ತೋಟ ಸ್ಥಾಪನೆಗೆ ಸಹಾಯಧನ.</td>
</tr>
</table>

| | | |
|---|---|---|
| | | 4. PMKSY ಅಡಿಯಲ್ಲಿ ಹನಿ ನೀರಾವರಿಗೆ ಸಹಾಯಧನ.<br>5. ರೇಷ್ಮೆ ಹುಳು ಸಾಕಾಣಿಕೆ ಮನೆಗೆ ಮತ್ತು ಸಲಕರಣೆಗಳನ್ನು ಖರೀದಿಸಲು ಸಹಾಯಧನ.<br>6. ದ್ವಿತಳಿ ಚಾಕಿ ಸಾಕಾಣಿಕೆಗೆ ಪ್ರೋತ್ಸಾಹಧನ.<br>7. ದ್ವಿತಳಿ ರೇಷ್ಮೆ ಗೂಡು ಉತ್ಪಾದನೆಗೆ ಪ್ರೋತ್ಸಾಹಧನ.<br>8. ರೇಷ್ಮೆ ಬೆಳೆಗಾರರಿಗೆ ಉಚಿತವಾಗಿ ಸೋಂಕು ನಿವಾರಕಗಳ ಸರಬರಾಜು.<br>9. ನೂಲು ಬಿಚ್ಚಾಣಿಕೆದಾರರಿಗೆ ಘಟಕ ಸ್ಥಾಪನೆ ಮತ್ತು ಯಂತ್ರೋಪಕರಣಗಳ ಖರೀದಿಗೆ ಮತ್ತು ಕಚ್ಚಾ ರೇಷ್ಮೆ ಉತ್ಪಾದನೆಗೆ ಪ್ರೋತ್ಸಾಹಧನ.<br>10. ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯಿಂದ ಒತ್ತೆ ಸಾಲ ಮತ್ತು ರೇಷ್ಮೆ ಖರೀದಿಗೆ ಅನುಕೂಲ ಕಲ್ಪಿಸಲಾಗಿದೆ. |
| ಊ | ಪ್ರಸ್ತುತ ರಾಜ್ಯದಲ್ಲಿ ರೇಷ್ಮೆ ಬೆಳೆಯುವ ಕ್ಷೇತ್ರ ಎಷ್ಟು; ಕಳೆದ ಐದು ವರ್ಷಗಳಲ್ಲಿ ರಾಜ್ಯದಲ್ಲಿ ಉತ್ಪಾದನೆಯಾದ ರೇಷ್ಮೆ ಪ್ರಮಾಣ ಎಷ್ಟು? (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) | ಪ್ರಸ್ತುತ ರಾಜ್ಯದಲ್ಲಿ ರೇಷ್ಮೆ ಬೆಳೆಯುವ ಕ್ಷೇತ್ರ ಮತ್ತು ಕಳೆದ ಐದು ವರ್ಷಗಳಲ್ಲಿ ಜಿಲ್ಲಾವಾರು ಉತ್ಪಾದನೆಯಾದ ರೇಷ್ಮೆ ಪ್ರಮಾಣದ ವಿವರಗಳನ್ನು **ಅನುಬಂಧ-4 ರಲ್ಲಿ** ನೀಡಿದೆ. |

**ಪಸಂಮೀ ಇ-241 ಸಲೆವಿ 2023**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

## ಅನುಬಂಧ-1

### ಶ್ರೀ ಸುನಿಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 819(893) ಕ್ಕೆ ಉತ್ತರ:

2023-24 ನೇ ಸಾಲಿನಲ್ಲಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ಪಶು ಸಂಗೋಪನೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಜಾರಿಯಲ್ಲಿರುವ **ಪ್ರೋತ್ಸಾಹದಾಯಕ ಕಾರ್ಯಕ್ರಮಗಳ** ವಿವರ

<table>
<tr><th>ಕ್ರ ಸಂ</th><th>ಕಾರ್ಯಕ್ರಮ</th><th>ವಿವರ</th></tr>
<tr><td></td><td colspan="2">ರಾಜ್ಯವಲಯದ ಕಾರ್ಯಕ್ರಮಗಳು</td></tr>
<tr><td>1</td><td>ಹಾಲು ಉತ್ಪಾದಕರಿಗೆ ಉತ್ತೇಜನ:</td><td>• ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಹಾಲು ಸರಬರಾಜು ಮಾಡುವ ಸದಸ್ಯರಿಗೆ ಪ್ರತಿ ಲೀಟರ್ ಗುಣಾತ್ಮಕ ಹಾಲಿಗೆ ರೂ. 5/- ರಂತೆ ಪ್ರೋತ್ಸಾಹಧನ ಪಾವತಿ.</td></tr>
<tr><td>2</td><td>ಕರ್ನಾಟಕ ಕುರಿ ಮತ್ತು ಕುರಿ ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ:</td><td>• 6+1 ಕುರಿ/ಮೇಕೆ ಘಟಕ ವಿತರಣೆ: ನಿಗಮದಲ್ಲಿ ನೊಂದಣಿಯಾಗಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರುಗಳಿಗೆ 6+1 ಕುರಿ/ಮೇಕೆ ಘಟಕ ವಿತರಣೆ.
<table>
<tr><th>ಘಟಕದವಿವರಗಳು</th><th>ಘಟಕದ ವೆಚ್ಚ</th><th>ಸಹಾಯಧನ ಶೇಕಡ 90%</th><th>ಫಲಾನುಭವಿ ವಂತಿಕೆ 10%</th></tr>
<tr><td>6+1 ಕುರಿ/ಮೇಕೆ ಘಟಕ ವಿತರಣೆ</td><td>ರೂ:45000/-</td><td>ರೂ:40500/-</td><td>ರೂ.4500/-</td></tr>
</table>
• ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆ: ರಾಜ್ಯದಲ್ಲಿನ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿನ ಅರ್ಹ ಕುರಿಗಾಹಿ ಸದಸ್ಯರುಗಳಿಗೆ 20+1 ಕುರಿ/ಮೇಕೆ ಘಟಕಗಳನ್ನು ಒದಗಿಸಲಾಗುವುದು.
<table>
<tr><th>ಘಟಕ ವೆಚ್ಚ</th><th>ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ (NCDC), ಸಹಕಾರ ಇಲಾಖೆ, ಭಾರತ ಸರ್ಕಾರದ ವತಿಯಿಂದ ಸಾಲ ( ಶೇ 50 ರಷ್ಟು)</th><th>ರಾಜ್ಯ ಸರ್ಕಾರದ ಸಹಾಯಧನ (ಶೇ.25 ರಷ್ಟು)</th><th>ಫಲಾನುಭವಿ ವಂತಿಕೆ (ಶೇ.25 ರಷ್ಟು)</th></tr>
<tr><td>ರೂ.175000/-</td><td>ರೂ.87500/-</td><td>ರೂ.43750/-</td><td>ರೂ.43750/-</td></tr>
</table>
• ಸಣ್ಣ ಪ್ರಾಣಿಗಳ ಆಕಸ್ಮಿಕ ಸಾವಿಗೆ ಆಪತ್ತು ನಿಧಿ :<br>
ಪ್ರಕೃತಿ ವಿಕೋಪ ಪರಿಹಾರ ವ್ಯಾಪ್ತಿಯಲ್ಲಿ ಬರುವ ಹಾಗೂ ವಿಮೆ ಮಾಡಿಸಿದ ಪ್ರಕರಣಗಳನ್ನು ಹೊರತುಪಡಿಸಿ ಇನ್ನುಳಿದ ಸಂದರ್ಭಗಳಲ್ಲಿ 6 ತಿಂಗಳು ಮೇಲ್ಪಟ್ಟ ಕುರಿ ಮತ್ತು ಮೇಕೆ ಆಕಸ್ಮಿಕ ಅಥವಾ ದೃಢೀಕೃತ ಸಾಂಕ್ರಾಮಿಕ ರೋಗಗಳಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ಕುರಿ /ಮೇಕೆ ಗೆ ರೂ. 5000/- ಪರಿಹಾರ ಧನ ಹಾಗೂ 3-6 ತಿಂಗಳ ವಯಸ್ಸಿನ ಕುರಿ ಮತ್ತು ಮೇಕೆಗಳ ಆಕಸ್ಮಿಕ ಮರಣಕ್ಕೆ ರೂ. 3500/- ಪರಿಹಾರ ಧನ ಒದಗಿಸಲಾಗುವುದು.</td></tr>
<tr><td>3</td><td>ಚರ್ಮಗಂಟು ರೋಗದಿಂದ ಮರಣ ಹೊಂದಿದ ರಾಸುಗಳಿಗೆ ಪರಿಹಾರಧನ:</td><td>• ಚರ್ಮಗಂಟು ರೋಗದಿಂದ ಮರಣ ಹೊಂದಿದ ರಾಸುಗಳಿಗೆ ಅವುಗಳ ಮಾಲೀಕರಿಗೆ ಪರಿಹಾರಧನ ವಿತರಿಸಲಾಗಿದೆ.</td></tr>
<tr><td>4</td><td>ರಾಸುಗಳ ಆಕಸ್ಮಿಕ ಆಪತ್ತು ನಿಧಿ:</td><td>ರಾಸುಗಳು ಆಕಸ್ಮಿಕ ಮರಣ ಹೊಂದಿದಾಗ ರೈತರಿಗೆ ಉಂಟಾಗುವ ಆರ್ಥಿಕ ನಷ್ಟವನ್ನು ಆಂಶಿಕವಾಗಿ ಭರಿಸಲು ಮರಣ ಹೊಂದಿದ ದನ, ಎಮ್ಮೆ, ಎತ್ತು, ಹೋರಿ, ಕಡಸು, ಮತ್ತು ಮಣಕಗಳಿಗೆ ರೂ.10,000/- ಪರಿಹಾರಧನವನ್ನು ರಾಸುಗಳ ಮಾಲೀಕರಿಗೆ ವಿತರಿಸಲಾಗುವುದು.</td></tr>
</table>

<table>
<tr><td>5</td><td>ರಾಷ್ಟ್ರೀಯ ಜಾನುವಾರು ಮಿಷನ್ (ಕೇಂದ್ರ ಪುರಸ್ಕೃತ ಯೋಜನೆ):</td><td>• ವಿಪತ್ತು ನಿರ್ವಹಣೆ-ಜಾನುವಾರು ವಿಮಾ ಯೋಜನೆ,</td></tr>
<tr><td>6</td><td>ಮುಖ್ಯಮಂತ್ರಿಗಳ ಅಮೃತ ಜೀವನ ಯೋಜನೆ:</td><td>• ಆರ್.ಕೆ. ವಿ. ವೈ. ಯೋಜನೆಯಡಿ ಕೃಷಿ ಕೂಲಿ ಕಾರ್ಮಿಕರಿಗೆ ಮತ್ತು ಪಶು ಸಂಗೋಪನೆಯಲ್ಲಿ ತೊಡಗಿಸಿಕೊಂಡ ಆಸಕ್ತ ರೈತರಿಗೆ ಒಂದು ಮಿಶ್ರ ತಳಿ ಹಾಲು ಕರೆಯುವ ಹಸು ಘಟಕದ ವಿತರಣೆ
<table>
<tr><th rowspan="2">ಕ್ರ ಸಂ</th><th rowspan="2">ಘಟಕದ ವಿವರ</th><th rowspan="2">ಘಟಕದ ಮೊತ್ತ</th><th colspan="2">ಸಹಾಯಧನ</th></tr>
<tr><th>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳು ಶೇ.33.33</th><th>ಸಾಮಾನ್ಯ ವರ್ಗ ಶೇ.25</th></tr>
<tr><td>1</td><td>ಹೈನುಗಾರಿಕೆ ಘಟಕ : ಒಂದು ಮಿಶ್ರ ತಳಿ ಹಾಲು ಕರೆಯುವ ಹಸು</td><td>ರೂ. 62000/-</td><td>ರೂ. 20665/-</td><td>ರೂ. 15500/-</td></tr>
<tr><td></td><td colspan="4">ಘಟಕದ ಸಹಾಯಧನ ಹೊರತುಪಡಿಸಿದಂತೆ ಉಳಿದ ಮೊತ್ತವನ್ನು ಫಲಾನುಭವಿಗಳಿಗೆ ವಂತಿಕೆ ಅಥವಾ ಸಾಲದ ರೂಪದಲ್ಲಿ ಬ್ಯಾಂಕಿನಿಂದ ಪಡೆಯುವುದು</td></tr>
</table></td></tr>
<tr><td>7</td><td>ಹೈನುಘಟಕ ವಿತರಣೆ</td><td>• ಹಾಲು ಉತ್ಪಾದಕರಿಗೆ ಉತ್ತೇಜನ ಕಾರ್ಯಕ್ರಮದ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಉಳಿಕೆಯಾಗುವ ಅನುದಾನದಲ್ಲಿ ಒಂದು ಮಿಶ್ರತಳಿ ಹಸು ಘಟಕವನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ವಿತರಿಸಲಾಗುವುದು.
<table>
<tr><th rowspan="2">ಕ್ರ ಸಂ</th><th rowspan="2">ಘಟಕದ ವಿವರ</th><th rowspan="2">ಘಟಕದ ಮೊತ್ತ</th><th>ಸಹಾಯಧನ</th></tr>
<tr><th>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳು ಶೇ.90</th></tr>
<tr><td>1</td><td>ಹೈನು ಘಟಕ : ಒಂದು ಮಿಶ್ರ ತಳಿ ಹಸು</td><td>ರೂ. 65000/-</td><td>ರೂ. 58500/-</td></tr>
<tr><td></td><td colspan="3">ಘಟಕದ ಸಹಾಯಧನ ಹೊರತುಪಡಿಸಿದಂತೆ ಉಳಿದ ಮೊತ್ತವನ್ನು ಫಲಾನುಭವಿಗಳಿಗೆ ವಂತಿಕೆ ಅಥವಾ ಸಾಲದ ರೂಪದಲ್ಲಿ ಬ್ಯಾಂಕಿನಿಂದ ಪಡೆಯುವುದು</td></tr>
</table></td></tr>
<tr><td>8</td><td>ಸುಸಜ್ಜಿತ ಸಂಚಾರಿ ಪಶುಚಿಕಿತ್ಸಾ ವಾಹನ</td><td>• ರೈತರ ಮನೆಬಾಗಿಲಿಗೆ ತುರ್ತು ಪಶುವೈದ್ಯಕೀಯ ಸೇವೆಯನ್ನು ನೀಡಲು 290 ಸುಸಜ್ಜಿತ ಸಂಚಾರಿ ಪಶುಚಿಕಿತ್ಸಾ ವಾಹನಗಳನ್ನು ಒದಗಿಸಲಾಗಿರುತ್ತದೆ. ಜಾನುವಾರು ಚಿಕಿತ್ಸೆ ಅಗತ್ಯವಿರುವ ಜಾನುವಾರು ಮಾಲೀಕರು ಸಹಾಯವಾಣಿ ಸಂಖ್ಯೆ 1962 ಕ್ಕೆ ಕರೆಮಾಡಿ ಅಗತ್ಯ ಸೇವೆಗಳನ್ನು ಪಡೆಯಬಹುದಾಗಿದೆ.</td></tr>
</table>

## ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) ರವರ ಪ್ರಶ್ನೆ ಸಂಖ್ಯೆ: 819(893) ಕ್ಕೆ ಉತ್ತರ

2018-19 ರಿಂದ 2022-23 ರವರೆಗೆ (ಕಳೆದ 5 ವರ್ಷಗಳಲ್ಲಿ) ಪಶು ಸಂಗೋಪನಾ ಇಲಾಖಾ ಕಾರ್ಯಕ್ರಮಗಳಿಗೆ ಹಂಚಿಕೆಯಾದ ಮತ್ತು ಖರ್ಚಾದ ಅನುದಾನದ ವಿವರ

(ರೂ. ಲಕ್ಷಗಳಲ್ಲಿ)

| ಕ್ರ ಸಂ | ಜಿಲ್ಲೆ | ಔಷಧ ಮತ್ತು ರಾಸಾಯನಿಕಗಳ ಸರಬರಾಜು | | | | | | | | | |
|---|---|---|---|---|---|---|---|---|---|---|---|
| | | 2018-19 | | 2019-20 | | 2020-21 | | 2021-22 | | 2022-23 | |
| | | ಹಂಚಿಕೆಯಾದ ಅನುದಾನ | ಖರ್ಚಾದ ಅನುದಾನ | ಹಂಚಿಕೆಯಾದ ಅನುದಾನ | ಖರ್ಚಾದ ಅನುದಾನ | ಹಂಚಿಕೆಯಾದ ಅನುದಾನ | ಖರ್ಚಾದ ಅನುದಾನ | ಹಂಚಿಕೆಯಾದ ಅನುದಾನ | ಖರ್ಚಾದ ಅನುದಾನ | ಹಂಚಿಕೆಯಾದ ಅನುದಾನ | ಖರ್ಚಾದ ಅನುದಾನ |
| 1 | ಬೆಂಗಳೂರು ನಗರ | 70.00 | 69.75 | 80.00 | 79.37 | 71.79 | 71.46 | 80.00 | 77.98 | 92.00 | 91.99 |
| 2 | ಬೆಂಗಳೂರು ಗ್ರಾಂ | 75.00 | 74.71 | 95.00 | 94.42 | 78.97 | 78.97 | 100.00 | 100.00 | 130.52 | 130.52 |
| 3 | ಚಿತ್ರದುರ್ಗ | 85.00 | 84.81 | 95.00 | 94.99 | 78.97 | 78.97 | 100.00 | 99.96 | 125.00 | 125.00 |
| 4 | ಕೋಲಾರ | 90.00 | 90.00 | 110.00 | 108.96 | 93.32 | 93.32 | 100.00 | 100.00 | 120.00 | 120.00 |
| 5 | ಶಿವಮೊಗ್ಗ | 130.00 | 128.02 | 140.00 | 139.89 | 143.58 | 143.58 | 160.00 | 159.00 | 186.00 | 186.00 |
| 6 | ತುಮಕೂರು | 150.00 | 150.00 | 165.00 | 163.70 | 143.58 | 143.58 | 160.00 | 159.99 | 240.00 | 239.99 |
| 7 | ದಾವಣಗೆರೆ | 100.00 | 99.80 | 110.00 | 86.50 | 100.5 | 100.41 | 115.00 | 113.00 | 124.00 | 124.00 |
| 8 | ರಾಮನಗರ | 65.00 | 64.42 | 90.00 | 89.98 | 86.15 | 85.88 | 100.00 | 99.99 | 140.00 | 140.00 |
| 9 | ಚಿಕ್ಕಬಳ್ಳಾಪುರ | 96.00 | 96.00 | 133.00 | 132.28 | 107.68 | 107.68 | 105.00 | 105.00 | 178.00 | 178.00 |
| 10 | ಮೈಸೂರು | 115.00 | 112.86 | 125.00 | 124.01 | 100.5 | 100.5 | 120.00 | 120.00 | 154.12 | 154.11 |
| 11 | ಚಿಕ್ಕಮಗಳೂರು | 72.00 | 71.84 | 120.00 | 117.90 | 59.75 | 59.75 | 70.00 | 70.00 | 95.00 | 95.00 |
| 12 | ದಕ್ಷಿಣ ಕನ್ನಡ | 80.00 | 80.00 | 100.00 | 100.00 | 86.15 | 86.15 | 100.00 | 100.00 | 125.00 | 125.00 |
| 13 | ಹಾಸನ | 120.00 | 119.57 | 140.00 | 139.34 | 118.45 | 115.96 | 125.00 | 125.00 | 185.00 | 184.99 |
| 14 | ಕೊಡಗು | 31.00 | 31.00 | 56.00 | 55.98 | 46.66 | 46.65 | 50.00 | 50.00 | 70.00 | 70.00 |
| 15 | ಮಂಡ್ಯ | 110.00 | 109.98 | 135.00 | 135.00 | 125.63 | 125.61 | 150.00 | 150.00 | 210.00 | 210.00 |
| 16 | ಚಾಮರಾಜನಗರ | 80.00 | 79.97 | 110.00 | 110.00 | 100.5 | 100.5 | 125.00 | 125.00 | 175.00 | 174.98 |
| 17 | ಉಡುಪಿ | 50.00 | 50.00 | 70.00 | 70.00 | 61.02 | 61.02 | 70.00 | 70.00 | 70.00 | 70.00 |
| 18 | ಬೆಳಗಾವಿ | 500.00 | 499.98 | 600.00 | 600.01 | 574.3 | 574.3 | 600.00 | 600.00 | 1000.00 | 1000.00 |
| 19 | ವಿಜಯಪುರ | 120.00 | 119.98 | 150.00 | 146.49 | 122.76 | 122.74 | 150.00 | 150.00 | 180.00 | 179.89 |
| 20 | ಧಾರವಾಡ | 65.00 | 64.98 | 85.00 | 84.99 | 79.73 | 79.73 | 100.00 | 100.00 | 210.00 | 210.00 |
| 21 | ಉತ್ತರ ಕನ್ನಡ | 225.00 | 224.96 | 287.00 | 286.96 | 301.51 | 301.51 | 315.00 | 315.00 | 365.00 | 364.98 |
| 22 | ಬಾಗಲಕೋಟೆ | 88.00 | 88.00 | 100.00 | 99.99 | 71.79 | 71.79 | 71.79 | 71.79 | 112.00 | 111.88 |
| 23 | ಗದಗ್ | 61.00 | 61.00 | 80.00 | 80.00 | 75.38 | 75.38 | 90.00 | 90.00 | 114.39 | 114.39 |
| 24 | ಹಾವೇರಿ | 80.00 | 79.89 | 100.00 | 98.99 | 86.15 | 86.14 | 100.00 | 100.00 | 180.00 | 180.00 |
| 25 | ಕಲಬುರಗಿ | 98.00 | 98.00 | 100.00 | 99.98 | 73.94 | 73.61 | 85.00 | 85.00 | 130.00 | 129.96 |
| 26 | ಬಳ್ಳಾರಿ | 110.00 | 109.88 | 140.00 | 162.99 | 143.58 | 143.58 | 150.00 | 150.00 | 135.00 | 135.00 |
| 27 | ಬೀದರ್ | 114.00 | 114.00 | 114.00 | 114.00 | 107.68 | 107.68 | 125.00 | 125.00 | 160.00 | 159.86 |
| 28 | ರಾಯಚೂರು | 80.00 | 79.23 | 120.00 | 119.96 | 107.68 | 107.68 | 125.00 | 125.00 | 153.00 | 152.00 |
| 29 | ಯಾದಗಿರಿ | 50.00 | 50.00 | 80.00 | 79.97 | 71.79 | 71.79 | 75.00 | 75.00 | 90.00 | 90.00 |
| 30 | ಕೊಪ್ಪಳ | 80.00 | 79.99 | 100.05 | 100.05 | 80.53 | 80.53 | 100.00 | 100.00 | 130.00 | 130.00 |

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2021–22 ನೇ ಸಾಲಿನ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿನ ಪಶುಭಾಗ್ಯ ಫಲಾನುಭವಿಗಳ ಆಧಾರಿತ ಕಾರ್ಯಕ್ರಮವನ್ನು "ಮುಖ್ಯಮಂತ್ರಿಗಳ ಅಮೃತ ಜೀವನ ಯೋಜನೆ" ಎಂದು ಅನುಷ್ಠಾನಗೊಳಿಸಲು ಮಾರ್ಗಸೂಚಿಗಳಿಗೆ ಅನುಮೋದನೆ ನೀಡುವ ಕುರಿತು.

ಓದಲಾಗಿದೆ: ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರ ಏಕ ಕಡತ ಸಂಖ್ಯೆ: ಆಪಸಂ/RKVY/ವಿವ–07/2021–22

***

ಪ್ರಸ್ತಾವನೆ:

ಮೇಲೆ ಓದಲಾದ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರ ಏಕ ಕಡತದಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಗೆ 2021–22 ನೇ ಸಾಲಿನಲ್ಲಿ ಫಲಾನುಭವಿ ಆಧಾರಿತ ಕಾರ್ಯಕ್ರಮ ಅನುಷ್ಠಾನಕ್ಕೆ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರೂ.5.00 ಕೋಟಿ ನಿಗದಿಪಡಿಸಲಾಗಿದೆ ಎಂದು ತಿಳಿಸಿದ್ದು, ಅದರಂತೆ ಪ್ರಸ್ತುತ ಸಾಲಿನಲ್ಲಿ ಇ-ಆಡಳಿತ ಇಲಾಖೆಯಿಂದ FRUITS-ID ಯನ್ನು ಬಳಸಿಕೊಂಡು ಕಾರ್ಯಕ್ರಮವನ್ನು ಅನುಷ್ಠಾಗೊಳಿಸಲು ಮಾರ್ಗಸೂಚಿಗಳನ್ನು ತಯಾರಿಸಿ ಅನುಮೋದನೆ ನೀಡುವಂತೆ ಏಕ ಕಡತದಲ್ಲಿ ಆಯುಕ್ತರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು 2021–22 ನೇ ಸಾಲಿನ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಫಲಾನುಭವಿಗಳ ಆಧಾರಿತ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಮಾರ್ಗಸೂಚಿಗಳಿಗೆ ಸರ್ಕಾರದ ಅನುಮೋದನೆ ನೀಡಲು ತೀರ್ಮಾನಿಸಲಾಗಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 121 ಪಪಾಯೋ 2021**
**ಬೆಂಗಳೂರು ದಿನಾಂಕ:14.09.2021.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2021–22 ನೇ ಸಾಲಿನ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿನ ಪಶುಭಾಗ್ಯ ಫಲಾನುಭವಿಗಳ ಆಧಾರಿತ ಕಾರ್ಯಕ್ರಮವನ್ನು "ಮುಖ್ಯಮಂತ್ರಿಗಳ ಅಮೃತ ಜೀವನ ಯೋಜನೆ" ಎಂದು ಅನುಷ್ಠಾನಗೊಳಿಸಲು ಈ ಆದೇಶಕ್ಕೆ ಲಗತ್ತಿರುವ ಅನುಬಂಧದಲ್ಲಿರುವ ಮಾರ್ಗಸೂಚಿಗಳಿಗೆ ಅನುಮೋದನೆ ನೀಡಿ ಆದೇಶಿಸಿದೆ.

ಮೇಲ್ಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ರವರು ಅನುಷ್ಠಾನಾಧಿಕಾರಿಯಾಗಿದ್ದು, ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರು ತಾಂತ್ರಿಕ ಸಂಯೋಗವನ್ನು ನೀಡಲು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಎನ್. ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ)

ಗೆ:-

1) ಮಹಾಲೇಖಪಾಲರು (ಎ&ಇ), ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
3) ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
4) ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್ ವಿವಿ ಗೋಪುರ ಬೆಂಗಳೂರು.
5) ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ ಬೆಂಗಳೂರು.
6) ಉಪನಿರ್ದೇಶಕರು, ಗಣಕಜಾಲ ನಿರ್ವಹಣಾ ಕೇಂದ್ರ ಖನಿಜ ಭವನ, ಬೆಂಗಳೂರು.
7) ಸಂಬಂಧಪಟ್ಟವರಿಗೆ (ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಮುಖಾಂತರ).
8) ಮಾನ್ಯ ಪಶುಸಂಗೋಪನೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
9) ಸರ್ಕಾರದ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಇವರ ಪತ್ರಾಂಕಿತ ಆಪ್ತ ಸಹಾಯಕರು,
10) ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಇವರ ಪತ್ರಾಂಕಿತ ಆಪ್ತ ಸಹಾಯಕರು.
11) ಕಂಟ್ರೋಲ್ ರೂಂ-ಕಂ-24/7 ಹೆಲ್ಪ್ ಲೈನ್ (ಸಹಾಯವಾಣಿ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಹೆಬ್ಬಾಳ ,ಬೆಂಗಳೂರು.
12) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 121 ಪಪಾಯೋ 2021**
**ಬೆಂಗಳೂರು ದಿನಾಂಕ:14.09.2021 ಕ್ಕೆ ಅನುಬಂಧ-1**

I "ಮುಖ್ಯ ಮಂತ್ರಿಗಳ ಅಮೃತ ಜೀವನ ಯೋಜನೆ"

ಈ ಯೋಜನೆಯನ್ನು ಈಗಾಗಲೇ ಇರುವ ಪಶುಭಾಗ್ಯ ತಂತ್ರಾಂಶದಿಂದ ಅನುಷ್ಠಾನಗೊಳಿಸುವುದು.

**ಅ) ಫಲಾನುಭವಿಗಳಿಗೆ ಸಂಬಂಧಿಸಿದ ಅನುಕೂಲಗಳು:**

1. ಫಲಾನುಭವಿಯು ಸ್ವತ: ತಾನೇ ಅಥವಾ ಕೃಷಿ, ತೋಟಗಾರಿಕೆ, ರೇಷ್ಮೆ ಇಲಾಖೆಯ ರೈತ ಸಂಪರ್ಕ ಕೇಂದ್ರಗಳಲ್ಲಿ ಮತ್ತು ಇಲಾಖೆಯ ಯಾವುದೇ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಅಲ್ಲಿಯ ಅಧಿಕಾರಿಗಳಿಗೆ ಅಗತ್ಯ ಇರುವ ಮಾಹಿತಿ ನೀಡಿ FRUITS ID (ಗುರುತಿನ ಸಂಖ್ಯೆ) ಪಡೆಯಬಹುದು, ಒಮ್ಮೆ ಈ ರೀತಿ ಪಡೆದ ಗುರುತಿನ ಸಂಖ್ಯೆಯು, ಶಾಶ್ವತ ಗುರುತಿನ ಸಂಖ್ಯೆಯಾಗಲಿದ್ದು, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ಸೇರಿದಂತೆ ಈ ಎಲ್ಲಾ ಇಲಾಖೆಗಳ ಸೌಲಭ್ಯ, ಸವಲತ್ತು ಪಡೆಯಲು ಬಳಸಬಹುದು.
2. FRUITS ID (ಗುರುತಿನ ಸಂಖ್ಯೆ) ಪಡೆದ ನಂತರ ಫಲಾನುಭವಿಗಳಿಗೆ ಸಂಬಂಧಿಸಿದ ಜಾತಿ ಪ್ರಮಾಣ ಪತ್ರ, ಜಮೀನಿನ ವಿವರ, ಬಡತನ ರೇಖೆಗಿಂತ ಕೆಳಗಿರುವ ಬಗ್ಗೆ ದೃಢೀಕರಣ, ಫೋಟೋ ಮುಂತಾದ ದಾಖಲೆಗಳನ್ನು ಸಲ್ಲಿಸುವ ಅಗತ್ಯ ಇರುವುದಿಲ್ಲ.

**II ಯೋಜನಾ ವ್ಯಾಪ್ತಿ:**

ರಾಜ್ಯದ 30 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುವುದು.

**III ಅರ್ಹ ಫಲಾನುಭವಿಗಳು:**

ಅ. ಫಲಾನುಭವಿ ಆಧಾರಿತ ಕಾರ್ಯಕ್ರಮಕ್ಕೆ ಆಧ್ಯತೆಯ ಮೇರೆಗೆ ಫಲಾನುಭವಿಗಳನ್ನಾಗಿ ಕೂಲಿ ಕೃಷಿ ಕಾರ್ಮಿಕರು ಮತ್ತು ಪಶುಸಂಗೋಪನೆಯಲ್ಲಿ ತೊಡಗಿಸಿಕೊಂಡ ಆಸಕ್ತರನ್ನು ಆಯ್ಕೆ ಮಾಡಲಾಗುವುದು.
ಆ. ಸದರಿ ಕಾರ್ಯಕ್ರಮದಲ್ಲಿ ಸರ್ಕಾರದ ನಿಯಮಗಳಂತೆ ಮಹಿಳೆಯರಿಗೆ (ಶೇ.33.3) ಅಲ್ಪಸಂಖ್ಯಾಂತರಿಗೆ (ಶೇ.15) ವಿಶೇಷ ಚೇತನರಿಗೆ (ಶೇ.3) ಆಧ್ಯತೆ ನೀಡಲಾಗುವುದು.
ಇ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಫಲಾನುಭವಿಗಳು ಜಾತಿ ಪ್ರಮಾಣ ಪತ್ರವನ್ನು ಹೊಂದಿರಬೇಕು (ಪ್ರಮಾಣ ಪತ್ರದಲ್ಲಿ RD No. ಇರಬೇಕು)
ಈ. ಅರ್ಜಿದಾರರು FRUITS ತಂತ್ರಾಂಶದಲ್ಲಿ ನೊಂದಾಯಿಸಿರಬೇಕು.

**IV ಫಲಾನುಭವಿಯ ಆಯ್ಕೆ:**

ವಿಧಾನ ಸಭಾ ಕ್ಷೇತ್ರವ್ಯಾಪ್ತಿಯಲ್ಲಿ ಸಹಾಯಕ ನಿರ್ದೇಶಕರು/ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ) ಸಾಕಷ್ಟು ಪ್ರಚಾರ ನೀಡಿ (ಪತ್ರಿಕಾ ಪ್ರಕಟಣೆ ಮೂಲಕ ಆಸಕ್ತಿಯುಳ್ಳವರಿಂದ "ಪಶುಭಾಗ್ಯ" ತಂತ್ರಾಂಶದ ಮುಖಾಂತರ ಫಲಾನುಭವಿಗಳ ಅರ್ಜಿ ಪಡೆದು, ವಿಧಾನ ಸಭಾ ಕ್ಷೇತ್ರದ ಆಯ್ಕೆ ಸಮಿತಿ ಮೂಲಕ ನಿಗದಿಪಡಿಸಿದ ಯೋಜನೆ, ಘಟಕ ಮತ್ತು ಗುರಿಗೆ ಅನುಗುಣವಾಗಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

--2

| ಫಲಾನುಭವಿ ಆಯ್ಕೆ ಸಮಿತಿ | | |
|---|---|---|
| 1. | ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು | ಅಧ್ಯಕ್ಷರು |
| 2. | ತಾಲ್ಲೂಕಿನ ಖಾಯಂ ವಾಸಿಸುತ್ತಿರುವ ವಿಧಾನ ಪರಿಷತ್ತಿನ ಸದಸ್ಯರು | ಸದಸ್ಯರು |
| 3. | ತಾಲ್ಲೂಕು ಕಾರ್ಯ ನಿರ್ವಹಣಾಧಿಕಾರಿ | ಸದಸ್ಯರು |
| 4. | ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ | ಸದಸ್ಯರು |
| 5. | ಶಿಶು ಅಭಿವೃದ್ಧಿ ಯೋಜನಾಧಿಕಾರಿ | ಸದಸ್ಯರು |
| 6. | ತಾಲ್ಲೂಕು ಸಹಾಯಕ ನಿರ್ದೇಶಕರು/ ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ) | ಸದಸ್ಯ ಕಾರ್ಯದರ್ಶಿ |

ಕೇಂದ್ರ ಸ್ಥಾನದ ಅಧಿಕಾರಿ ಸದಸ್ಯ ಕಾರ್ಯದರ್ಶಿಯಾಗಿಯೂ, ಇತರ ತಾಲ್ಲೂಕುಗಳ ಅಧಿಕಾರಿಗಳು ಸದಸ್ಯರುಗಳಾಗಿರುತ್ತಾರೆ.

ವಿಧಾನಸಭೆ ಕ್ಷೇತ್ರದಲ್ಲಿ ಹೆಚ್ಚು ಭೌಗೋಳಿಕ ವಿಸ್ತಾರ ಇರುವ ತಾಲ್ಲೂಕಿನ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ತಾಲ್ಲೂಕು ಪಶು ಆಸ್ಪತ್ರೆಯ/ ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆಯ ತಾಲ್ಲೂಕು ಕಛೇರಿಯ ಸಹಾಯಕ ನಿರ್ದೇಶಕರು/ಮುಖ್ಯ ಪಶು ವೈದ್ಯಾಧಿಕಾರಿಗಳು (ಆಡಳಿತ) ರವರು ಈ ಸಮಿತಿಯ ಕಾರ್ಯದರ್ಶಿಗಳಾಗಿರುತ್ತಾರೆ. ಇದೇ ವಿದಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಇತರೆ ತಾಲ್ಲೂಕುಗಳ ಸಂಬಂಧಿಸಿದ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು (ಕ್ರಮ ಸಂಖ್ಯೆ3,4,5,6)ರವರು ಸಹ ಸದಸ್ಯರಾಗಿರುತ್ತಾರೆ. ಅದೇ ರೀತಿ ಇದೆ ಕ್ಷೇತ್ರದಲ್ಲಿ ಹೆಚ್ಚು ತಾಲ್ಲೂಕುಗಳು ಬಂದಲ್ಲಿ ಕ್ಷೇತ್ರದ ಕೇಂದ್ರಸ್ಥಾನದ ಅಧಿಕಾರಿ ಸದಸ್ಯ ಕಾರ್ಯದರ್ಶಿಯಾಗಿಯೂ ಇತರೆ ತಾಲ್ಲೂಕುಗಳ ಅಧಿಕಾರಿಗಳು ಸಹ ಕಾರ್ಯದರ್ಶಿಗಳಾಗಿರುತ್ತಾರೆ.

## V ಸಮಿತಿಯ ಕಾರ್ಯವ್ಯಾಪ್ತಿ

ಅ. ಫಲಾನುಭವಿಗಳನ್ನು ನಿರ್ದಿಷ್ಟ ಸಮಯದಲ್ಲಿ ವಿವಿಧ ಯೋಜನೆಗಳ ನಿಗದಿತ ಗುರಿಗಳನ್ವಯ ಆಯ್ಕೆ ಮಾಡಿ, ಈ ಕಾರ್ಯಕ್ರಮವು ಯಶಸ್ವಿಯಾಗಿ ಕಾರ್ಯಗತವಾಗಲು ಸಲಹೆ ನೀಡುವುದು.
ಆ. ಯೋಜನೆಯಲ್ಲಿ ಲೋಪದೋಷಗಳು ಕಂಡುಬಂದರೆ ಅಂತಹವುಗಳನ್ನು ನಿವಾರಿಸಲು ಸಲಹೆ ನೀಡುವುದು.
ಇ. ಗುಣಮಟ್ಟದ ಸ್ವತ್ತುಗಳನ್ನು ಖರೀದಿಸಲು ಸಲಹೆ ನೀಡುವುದು.
ಈ. ಫಲಾನುಭವಿಯ ನಿರಾಸಕ್ತಿ, ಇನ್ನಿತರೆ ಕಾರಣಗಳಿಂದ ಸರ್ಕಾರದಿಂದ ಬಿಡುಗಡೆ ಆದ ಅನುದಾನವು ಬಳಕೆಯಾಗದ ಸಂದರ್ಭದಲ್ಲಿ ಅನುದಾನಕ್ಕೆ ಅನುಗುಣವಾಗಿ ಪರ್ಯಾಯ ಫಲಾನುಭವಿಗಳನ್ನು ಆಯ್ಕೆ ಮಾಡಿ ಅನುಷ್ಠಾನ ಮಾಡುವುದು.

## VI ಸದಸ್ಯ ಕಾರ್ಯದರ್ಶಿಯವರ ಕಾರ್ಯ

ಅ. ಫಲಾನುಭವಿಗಳ ಆಯ್ಕೆ ಮುಗಿದ ಕೂಡಲೇ "ಪಶುಭಾಗ್ಯ ತಂತ್ರಾಂಶ"ದಲ್ಲಿ ತಪ್ಪದೆ ನಮೂದಿಸುವುದು.
ಆ. ಆಯ್ಕೆ ನಂತರ ಸಂಬಂಧಿಸಿದ ಸ್ಥಳೀಯ ಅಧಿಕಾರಿಗಳು ಯೋಜನೆಯನ್ನು ಅನುಷ್ಠಾನ ಮಾಡಲು ಕ್ರಮ ವಹಿಸುವುದು.

---3

## VII. ಯೋಜನಾ ಅನುಷ್ಠಾನ ವಿಧಾನ

1. ರಾಜ್ಯ ಮಟ್ಟದಲ್ಲಿ ಜಿಲ್ಲೆಯ ಗ್ರಾಮೀಣ ಭಾಗದ ಜನಸಂಖ್ಯೆಗೆ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ. ಹಾಗೂ ಸಾಮಾನ್ಯ) ಅನುಗುಣವಾಗಿ ಹಾಗೂ ಅಗತ್ಯತೆಯನುಸಾರ ಜಿಲ್ಲಾವಾರು ಗುರಿಗಳನ್ನು ನಿಗಧಿಪಡಿಸುವುದು.
2. ಜಿಲ್ಲಾ ಉಪ ನಿರ್ದೇಶಕರು ತಾಲ್ಲೂಕುವಾರು ಮತ್ತು ಘಟಕವಾರು ಆಯಾ ತಾಲ್ಲೂಕಿನಲ್ಲಿರುವ ಜನಸಂಖ್ಯೆಗೆ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಸಾಮಾನ್ಯ) ಅನುಸಾರವಾಗಿ ಹಂಚಿಕೆ ಮಾಡುವುದು ಹಾಗೂ ಅದಕ್ಕೆ ತಕ್ಕಂತೆ ಅನುದಾನವನ್ನು ಮರುಹಂಚಿಕೆ ಮಾಡುವುದು.
3. ಸಹಾಯಕ ನಿರ್ದೇಶಕರು ಆಯಾ ತಾಲ್ಲೂಕಿಗೆ ನಿಗಧಿಯಾದ ಗುರಿಗಳ ಪೈಕಿ ವಿಧಾನಸಭಾ ಕ್ಷೇತ್ರವಾರು ಗುರಿಗಳನ್ನು ಮತ್ತು ಅದಕ್ಕೆ ತಕ್ಕಂತೆ ಅನುದಾನವನ್ನು ಮರು ಹಂಚಿಕೆ ಮಾಡಿ, ಆಸಕ್ತ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನ ಮಾಡಿ "ಪಶುಭಾಗ್ಯ ತಂತ್ರಾಂಶ"ದಲ್ಲಿ ಅಳವಡಿಸುವುದು.
4. ಸಹಾಯಕ ನಿರ್ದೇಶಕರು ಅರ್ಹ ಫಲಾನುಭವಿಗಳ ಆಯ್ದೆಗಾಗಿ ವಿಧಾನ ಸಭಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿನ ಸಮಿತಿ ಮುಂದೆ ಮಂಡಿಸಲು ಈಗಾಗಲೇ ಸ್ವೀಕರಿಸಿರುವ ಅರ್ಜಿಗಳ ಮಾಹಿತಿಯನ್ನು "ಪಶು ಭಾಗ್ಯ ತಂತ್ರಾಂಶದ" ದ ಮೂಲಕ ಪಡೆದು ಮಂಡಿಸಿ ನಿಗದಿತ ಗುರಿಗೆ ಅನುಗುಣವಾಗಿ ಆಯ್ಕೆ ಮಾಡುವುದು.
5. ಫಲಾನುಭವಿಗಳನ್ನು ಆಯ್ಕೆಗೊಳಿಸುವಾಗ ಮುಖ್ಯ ಮಂತ್ರಿಗಳ ಕಾರ್ಯಾಲಯದಿಂದ ಇಲಾಖಾ ಸಚಿವರಿಂದ, ಸಚಿವಾಲಯದಿಂದ, ಆಯುಕ್ತಾಲಯದಿಂದ "ಜನಸ್ಪಂದನ" ಕೋಶದಿಂದ ಸ್ವೀಕರಿಸಿರುವ ಅರ್ಜಿಗಳನ್ನು ಸಹ ಫಲಾನುಭವಿಗಳ ಆಯ್ಕೆ ವೇಳೆ ಪರಿಗಣಿಸುವುದು.
6. ಉಪ ನಿರ್ದೇಶಕರು ಜಿಲ್ಲೆಗೆ ನಿಗದಿಯಾದ ಗುರಿಗಳನ್ನು ತಾಲ್ಲೂಕು ಸಹಾಯಕ ನಿರ್ದೇಶಕರು/ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ) ಇವರಿಂದ ಮಾಹಿತಿ ಪಡೆದು ತಾಲ್ಲೂಕುವಾರು ಜಿಲ್ಲಾ ಲೀಡ್ ಬ್ಯಾಂಕ್ ಮುಖಾಂತರ ಬ್ಯಾಂಕ್‌ವಾರು ಗುರಿ ನಿಗಧಿಪಡಿಸಲು ಕ್ರಮ ವಹಿಸುವುದು.
7. ಫಲಾನುಭವಿಗಳಿಂದ ವಂತಿಗೆ ಸ್ವೀಕರಿಸುವಂತಹ ಯೋಜನೆಗಳನ್ನು ವಂತಿಗೆ ಹಣವನ್ನು ಫಲಾನುಭವಿಗಳಿಂದ ಬ್ಯಾಂಕ್ ಖಾತೆಗೆ ಜಮೆ ಮಾಡಿಸಿ, ನಂತರ ಸಹಾಯಧನವನ್ನು ಅದೇ ಖಾತೆಗೆ ಜಮಾ ಮಾಡಿ ಸ್ವತ್ತನ್ನು ಮಾರಾಟ ಮಾಡಿರುವವರಿಗೆ ಪಾವತಿಸುವಂತೆ ಅನುಷ್ಠಾನಾಧಿಕಾರಿಗಳಿಗೆ ಕಾರ್ಯಗತಗೊಳಿಸುವುದು.
8. ಸಹಾಯಕ ನಿರ್ದೇಶಕರು ವಿಳಂಬವಿಲ್ಲದೇ ಆಯ್ಕೆಯಾದ ಫಲಾನುಭವಿಗಳ ಅರ್ಜಿಯನ್ನು ದಾಖಲೆಗಳೊಂದಿಗೆ ಸಂಬಂಧಿಸಿದ ಪಶುವೈದ್ಯಾಧಿಕಾರಿಗಳ ಮುಖಾಂತರ ಸಾಲ ಮಂಜೂರಾತಿಗಾಗಿ ಬ್ಯಾಂಕ್‌ಗಳಿಗೆ ಸಲ್ಲಿಸುವುದು ಹಾಗೂ ಈ ಬಗ್ಗೆ ಪಶುಭಾಗ್ಯ ತಂತ್ರಾಂಶದಲ್ಲಿ ನಮೂದಿಸುವುದು.
9. ಅನುಷ್ಠಾನ ಅಧಿಕಾರಿಗಳಾದ ಸ್ಥಳೀಯ ಪಶುವೈದ್ಯಾಧಿಕಾರಿಗಳು ಸಂಬಂಧಿಸಿದ ಬ್ಯಾಂಕ್‌ಗಳಿಂದ ಸಾಲ ಮಂಜೂರಾತಿ ಪತ್ರ ಪಡೆದು ಸಹಾಯಕ ನಿರ್ದೇಶಕರಿಗೆ ಸಲ್ಲಿಸುವುದು.
10. ಈ ಯೋಜನೆಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳು, ವಾಣಿಜ್ಯ ಬ್ಯಾಂಕ್ ಹಾಗೂ ಸಹಕಾರಿ ಸಂಘಗಳ ಮುಖಾಂತರವು ಸಹ ಸಾಲ ಮಂಜೂರಾತಿಯೊಂದಿಗೆ ಅನುಷ್ಠಾನಗೊಳಿಸುವುದು.
11. ಸಹಾಯಕ ನಿರ್ದೇಶಕರು ಅಥವಾ ಅನುಷ್ಠಾನಾಧಿಕಾರಿಗಳು ಆಯ್ಕೆಯಾದ ಫಲಾನುಭವಿಗಳ ಸಹಾಯಧನವನ್ನು ಆಯಾ ಬ್ಯಾಂಕ್‌ಗಳಿಗೆ ಬಿಡುಗಡೆಗೊಳಿಸಿ ಯೋಜನೆ ಅನುಷ್ಠಾನಗೊಳಿಸುವುದು.
12. ಆಯ್ಕೆಗೊಂಡ ಫಲಾನುಭವಿಗಳ ರಾಸುಗಳಿಗೆ ಯುಐಡಿ ಸಂಖ್ಯೆ ಇರುವ ಟ್ಯಾಗ್‌ಗಳನ್ನು ಅಳವಡಿಸಿ, ಫಲಾನುಭವಿ, ಮಾರಾಟಗಾರ, ಬ್ಯಾಂಕ್ ಪ್ರತಿನಿಧಿ ಮತ್ತು ಅನುಷ್ಠಾನಾಧಿಕಾರಿ ಸ್ವತ್ತಿನೊಂದಿಗೆ ಇರುವ ಫೋಟೋವನ್ನು "ಫಲಾನುಭವಿ ತಂತ್ರಾಂಶದಲ್ಲಿ" ಎಲ್ಲಾ ವಿವರಗಳೊಂದಿಗೆ ದಾಖಲಿಸುವುದು.

--4

13. ಗ್ರಾಮೀಣ ಪ್ರದೇಶದ ಫಲಾನುಭವಿಗಳಿಗೆ ದನದ ಕೊಟ್ಟಿಗೆ ನಿರ್ಮಾಣಕ್ಕಾಗಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (MGNREGA) ಯೋಜನೆಯಡಿ ಅವಕಾಶ ಕಲ್ಪಿಸಲು ಸ್ಥಳೀಯ ಗ್ರಾಮ ಪಂಚಾಯಿತಿ ಪಿ.ಡಿ.ಓ.ಗಳಿಗೆ ಹಾಗೂ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮಾಹಿತಿ ನೀಡುವುದು.
14. ಕಳೆದ 5 ವರ್ಷಗಳಲ್ಲಿ ಪಶುಪಾಲನಾ ಇಲಾಖೆಯಲ್ಲಿ ವಿವಿಧ ಯೋಜನೆಗಳಲ್ಲಿ ಹೈನುಗಾರಿಕೆಗೆ ಸಹಾಯಧನ ಸವಲತ್ತು ಪಡೆದಿರುವ ಕುಟುಂಬಗಳು ಮತ್ತೆ ಈ ಯೋಜನೆಯ ಸವಲತ್ತು ಪಡೆಯಲು ಅರ್ಹರಿರುವುದಿಲ್ಲ.
15. ಈ ಯೋಜನೆಯಡಿಯ ಫಲಾನುಭವಿಗಳ ಸ್ವತ್ತುಗಳನ್ನು ವಿಮೆಗೊಳಪಡಿಸಲು ಕ್ರಮ ವಹಿಸುವುದು.
16. ಆಯ್ಕೆಯಾದ ಫಲಾನುಭವಿಯು ಯೋಜನೆಯ ಅನುಷ್ಠಾನಕ್ಕೆ ಮೊದಲು ಮರಣ ಹೊಂದಿದಲ್ಲಿ ಅವರ ಅಧೀಕೃತ ವಾರಸುದಾರರಿಗೆ ಈ ಯೋಜನೆಯ ಸವಲತ್ತನ್ನು ನೀಡಲು ಕ್ರಮ ವಹಿಸುವುದು.
17. ಅನುಷ್ಠಾನಗೊಳಿಸಿದ ಕೂಡಲೇ ಹಣ ಬಳಕೆ ಪ್ರಮಾಣ ಪತ್ರ ಹಾಗೂ ಪ್ರಗತಿ ವಿವರಗಳನ್ನು ಆಯುಕ್ತಾಲಯಕ್ಕೆ ಸಲ್ಲಿಸಲು ತಪ್ಪದೇ ಕ್ರಮ ವಹಿಸುವುದು.

## VIII. ಯೋಜನಾ ಅನುಷ್ಠಾನಾಧಿಕಾರಿಗಳು :

ಸ್ಥಳೀಯ ಅಧಿಕಾರಿಗಳಾದ ಸಹಾಯಕ ನಿರ್ದೇಶಕರು ಅಥವಾ ಪಶುವೈದ್ಯಾಧಿಕಾರಿಗಳು ಯೋಜನೆಯ ಅನುಷ್ಠಾನಾಧಿಕಾರಿಗಳಾಗಿರುತ್ತಾರೆ ಮತ್ತು ಈ ಕೆಳಗಿನ ಎಲ್ಲ ದಾಖಲೆ ಪತ್ರಗಳ ಮೂಲ ಪ್ರತಿಗಳನ್ನು ನಿರ್ವಹಿಸುವುದು ಅವರ ಜವಾಬ್ದಾರಿ ಆಗಿರುತ್ತದೆ.

1. ಸಾಲ ಮಂಜೂರಾತಿ ಪತ್ರ.
2. FRUITS ID ದೃಢೀಕರಣ ಪತ್ರ.
3. ಫಲಾನುಭವಿಯಿಂದ ಸಹಾಯಧನ ಸ್ವೀಕೃತಿ ಪತ್ರ.
4. ಫಲಾನುಭವಿಯೊಂದಿಗೆ ರಾಸುವಿನ ಭಾವಚಿತ್ರ-3 ವಿವಿಧ ಕೋನಗಳಲ್ಲಿ.
5. ಸ್ವತ್ತು ಖರೀದಿ ನಗದು ರಸೀದಿ.
6. ಜಾನುವಾರು ಆರೋಗ್ಯ ದೃಢೀಕರಣ ಪತ್ರ, ವಿಮಾ ಪಾಲಿಸಿ,
7. ಸಾಗಾಣಿಕೆ ವೆಚ್ಚದ ಬಿಲ್ (ರಶೀದಿ)
8. ಪಶು ಆಹಾರ ಖರೀದಿ ಬಿಲ್‌ಗಳು.
9. ಇತರೆ ದಾಖಲಾತಿಗಳು.
10. ಫಲಾನುಭವಿಗಳ ಆಧಾರ್ ಪ್ರತಿ.

## XI. ಸಹಾಯಧನ ಸೆಳೆಯುವ ವಿಧಾನ :

- ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ "ಮುಖ್ಯ ಮಂತ್ರಿಗಳ ಅಮೃತ ಜೀವನ ಯೋಜನೆ" ಕಾರ್ಯಕ್ರಮವನ್ನು PFMS ಮುಖಾಂತರ ಅನುಷ್ಠಾನಗೊಳಿಸಬೇಕಾಗಿರುವುದರಿಂದ ಉಪ ನಿರ್ದೇಶಕರು ಶೂನ್ಯ ಶಿಲ್ಕಿನ ಖಾತೆ ತೆರೆಯುವುದು.
- ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ "ಮುಖ್ಯ ಮಂತ್ರಿಗಳ ಅಮೃತ ಜೀವನ ಯೋಜನೆ" ಕಾರ್ಯಕ್ರಮಕ್ಕೆ ಅನುದಾನವನ್ನು PFMS ಮುಖಾಂತರ ಅನುದಾನವನ್ನು ಜಿಲ್ಲಾ ಉಪ ನಿರ್ದೇಶಕರಿಗೆ ಬಿಡುಗಡೆಗೊಳಿಸಲಾಗುವುದು.

--5

- ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು ಆಯ್ಕೆಯಾದ ಫಲಾನುಭವಿಗಳ ಪಟ್ಟಿಯೊಂದಿಗೆ ಬ್ಯಾಂಕ್‌ಗಳಿಂದ ಸಾಲ ಮಂಜೂರಾತಿ ಬಗ್ಗೆ ಒಪ್ಪಿಗೆ ಪತ್ರ/ಫಲಾನುಭವಿಗಳ ವಂತಿಕೆ ಭರಿಸಿರುವ ಕುರಿತು ದಾಖಲಾತಿಗಳೊಂದಿಗೆ ಉಪ ನಿರ್ದೇಶಕರುಗಳಿಗೆ ಸಲ್ಲಿಸುವುದು,
- ಸಹಾಯಧನ ಫಲಾನುಭವಿಗಳ ಖಾತೆಗೆ ಜಮೆ ಮಾಡುವ ಮುನ್ನ ಸದರಿ ಸಹಾಯಧನವನ್ನು ಯೋಜನೆ ಅನುಷ್ಠಾನಗೊಳಿಸುವವರೆಗೆ **"Hold Balance"** ನಲ್ಲಿ ಇರಿಸುವಂತೆ ಸಂಬಂಧಿಸಿದ ಬ್ಯಾಂಕ್ ವ್ಯವಸ್ಥಾಪಕರಿಗೆ ಅನುಷ್ಠಾನಾಧಿಕಾರಿಗಳು ಲಿಖಿತ ವಿನಂತಿ ನೀಡುವುದು. ಇದನ್ನು ಜಿಲ್ಲಾ ಉಪ ನಿರ್ದೇಶಕರುಗಳು ಖಾತ್ರಿ ಪಡಿಸಿಕೊಳ್ಳುವುದು
- ಸಂಬಂಧಿಸಿದ ಫಲಾನುಭವಿಗಳ ಖಾತೆಗೆ ಸಹಾಯಧನ ಜಮೆ ಮಾಡುವ ಮುನ್ನ ಸಹಾಯಧನವನ್ನು ಯೋಜನೆ ಅನುಷ್ಠಾನಕ್ಕಲ್ಲದೇ ಬೇರೆ ಯಾವುದೇ ಕಾರಣಕ್ಕೂ ಸೆಳೆಯದಿರುವ ಬಗ್ಗೆ ಹಾಗೂ ಸಂಬಂಧಿಸಿದ ಖಾತೆಯಲ್ಲಿ Hold Balance ಇರಿಸುವಂತೆ ಫಲಾನುಭವಿಯು ಸಂಬಂಧಿಸಿದ ಬ್ಯಾಂಕ್ ವ್ಯವಸ್ಥಾಪಕರಿಗೆ ಲಿಖಿತ ಮೂಲಕ ವಿನಂತಿಸುತ್ತಾ ಸಲ್ಲಿಸಿರುವುದರ ಪತ್ರದ ಪ್ರತಿಯನ್ನು ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು ಜಿಲ್ಲಾ ಉಪ ನಿರ್ದೇಶಕರುಗಳಿಗೆ ಸಲ್ಲಿಸುವುದು.
- ಉಪ ನಿರ್ದೇಶಕರು ಸಹಾಯಧನವನ್ನು ಫಲಾನುಭವಿಗಳ ಖಾತೆಗೆ ನೇರವಾಗಿ "DBT" ಮುಖಾಂತರ ವರ್ಗಾಯಿಸುವುದು.
- ಸಹಾಯಧನವನ್ನು DBT ಮಾಡಿದ ನಂತರ ಅನುಷ್ಠಾನಾಧಿಕಾರಿಗಳು ಸಹಾಯಧನ ಮತ್ತು ಬ್ಯಾಂಕ್ ಸಾಲ/ಫಲಾನುಭವಿಗಳ ವಂತಿಕೆ ಕ್ರೋಢೀಕರಿಸಿ ಸ್ವತ್ತನ್ನು ಖರೀದಿಸಿ (ಒಂದು ಮಿಶ್ರತಳಿ/ಎಮ್ಮೆ) ಫಲಾನುಭವಿಗಳಿಗೆ ವಿತರಿಸುವುದು.
- ಫಲಾನುಭವಿ ಆಯ್ಕೆಯಾಗಿರುವ ಬಗ್ಗೆ ಸಮಿತಿಯಿಂದ ಅನುಮೋದಿಸಿದ ಸಮಿತಿ ಸದಸ್ಯರುಗಳ ಸಹಿಯೊಂದಿಗೆ ಪಟ್ಟಿಯನ್ನು ಪಶು ಭಾಗ್ಯ ತಂತ್ರಾಂಶದಲ್ಲಿರುವ ಮಾಹಿತಿಯೊಂದಿಗೆ ಸಹಾಯಕ ನಿರ್ದೇಶಕರು ಸಮೀಕರಿಸುವುದು.
- FRUITS ID ಇರುವ ದೃಢೀಕರಣ ಪತ್ರ
- ಫಲಾನುಭವಿಯ ಭಾವಚಿತ್ರ,
- ಫಲಾನುಭವಿಯ ಕುಟುಂಬ ಈ ಹಿಂದೆ ಇಲಾಖೆಯಿಂದ ಸಹಾಯ ಪಡೆಯದಿರುವ ಬಗ್ಗೆ ದೃಢೀಕರಣ ಪತ್ರ,
- ಬ್ಯಾಂಕ್‌ಗಳಿಂದ ಸಾಲ ಮಂಜೂರಾತಿ ಬಗ್ಗೆ ಒಪ್ಪಿಗೆ ಪತ್ರ (ನಿಗದಿತ ನಮೂನೆಯಲ್ಲಿ) ಪಡೆಯುವುದು.
- ಫಲಾನುಭವಿಯಿಂದ ಸಹಾಯಧನ ಪಡೆದಿರುವ ಬಗ್ಗೆ ಮುಂಗಡ ರಸೀದಿ (ತ್ರಿ ಪ್ರತಿಯಲ್ಲಿ)

## X ಸ್ವತ್ತು ಖರೀದಿ ಸಮಿತಿ :

1) ಫಲಾನುಭವಿಯ ಗ್ರಾಮ ವ್ಯಾಪ್ತಿಯ ಅನುಷ್ಠಾನ ಅಧಿಕಾರಿಗಳಾದ ಸ್ಥಳೀಯ ಸಹಾಯಕ ನಿರ್ದೇಶಕರು / ಪಶುವೈದ್ಯಾಧಿಕಾರಿ.
2) ಬ್ಯಾಂಕ್ ಅಧಿಕಾರಿ/ಪ್ರತಿನಿಧಿ (ಬ್ಯಾಂಕುಗಳಿಂದ ಸಾಲ ಪಡೆದ ಯೋಜನೆಗಳಿಗೆ ಮಾತ್ರ)
3) ಫಲಾನುಭವಿ.
4) ಮಾರಾಟಗಾರ.

## XI ಯೋಜನೆ ಮೇಲ್ವಿಚಾರಣೆ :

1) ಅನುಷ್ಠಾನಾಧಿಕಾರಿಗಳು ಸ್ವತ್ತು ಖರೀದಿ ಸಮಿತಿ ಮೂಲಕ ರಾಸುಗಳ ಖರೀದಿ ಮಾಡುವುದು.

--6

2) ಅನುಷ್ಠಾನಾಧಿಕಾರಿಗಳು ಸಂಬಂಧಿಸಿದ ಮೂಲ ದಾಖಲೆ ಪತ್ರಗಳನ್ನು ತಮ್ಮ ಕಛೇರಿಯಲ್ಲಿ ನಿರ್ವಹಣೆ ಮಾಡುವುದು.
3) ಅನುಷ್ಠಾನಾಧಿಕಾರಿಗಳು ಯೋಜನೆಯಲ್ಲಿ ನೀಡಿದ ರಾಸುಗಳ ಆರೋಗ್ಯ ರಕ್ಷಣೆ, ಲಸಿಕೆ ಕಾರ್ಯಕ್ರಮ ಕೈಗೊಳ್ಳುವುದು.
4) ವಿತರಿಸಿದ ಸ್ವತ್ತುಗಳ ಅನುಪಾಲನೆ ವಹಿ (Asset register) ನಿರ್ವಹಿಸುವುದು.
5) ಅನುಷ್ಠಾನಾಧಿಕಾರಿಗಳು ಹಣ ವಿನಿಯೋಗ ದೃಢೀಕರಣ ಪತ್ರಗಳನ್ನು ಬ್ಯಾಂಕ್‌ಗಳಿಂದ ಪಡೆದು, ದೃಢೀಕರಿಸಿ ತಾಲ್ಲೂಕು ಸಹಾಯಕ ನಿರ್ದೇಶಕರುಗಳ ಮೂಲಕ ಉಪ ನಿರ್ದೇಶಕರಿಗೆ ಸಲ್ಲಿಸುವುದು.
6) ಉಪ ನಿರ್ದೇಶಕರುಗಳು ಯೋಜನೆಯ ಅನುಷ್ಠಾನದ ಬಗ್ಗೆ ಹಾಗೂ ಯೋಜನೆಯ ಅನುಸರಣೆ / ಪ್ರಗತಿಯ ಬಗ್ಗೆ ಕಾಲಕಾಲಕ್ಕೆ ವರದಿ ಪಶುಭಾಗ್ಯ ತಂತ್ರಾಂಶದಲ್ಲಿ ಸಲ್ಲಿಸುವುದು.
7) ಜಿಲ್ಲೆಯ ಉಪ ನಿರ್ದೇಶಕರು ಅನುಷ್ಠಾನಗೊಂಡ ಯೋಜನೆಯ ಪ್ರತಿ ತಾಲ್ಲೂಕಿನ ಕನಿಷ್ಠ ಶೇ.2 ರಷ್ಟು ಹಾಗೂ ತಾಲ್ಲೂಕು ಸಹಾಯಕ ನಿರ್ದೇಶಕರು ಶೇ.5 ರಷ್ಟು ಫಲಾನುಭವಿಗಳ ಮನೆಗೆ ಭೇಟಿ ನೀಡಿ ಅನುಷ್ಠಾನದ ಮತ್ತು ಸ್ವತ್ತನ್ನು ನಿರ್ವಹಿಸಿರುವ ಬಗ್ಗೆ ಪರಿಶೀಲಿಸಿ ಮಾಡಬೇಕು.
8) ಅನುಷ್ಠಾನಾಧಿಕಾರಿಗಳು ಕಾರ್ಯಕ್ರಮ ಅನುಷ್ಠಾನಗೊಂಡ ನಂತರ ಕನಿಷ್ಠ ಪ್ರತಿ ಮಾಹೆ ಒಮ್ಮೆ ಖುದ್ದು ಭೇಟಿ ನೀಡಿ ಸ್ವತ್ತು ಪರಿಶೀಲನೆ ಮಾಡಿ ಪಶುಭಾಗ್ಯ ತಂತ್ರಾಂಶದಲ್ಲಿ ಮಾಹಿತಿ ದಾಖಲಿಸುವುದು ಮತ್ತು ಈ ಕುರಿತು ಸ್ವತ್ತು ಅನುಸರಣೆ ವಹಿಯಲ್ಲಿ ನಮೂದಿಸುವುದು.

## XII ಕ್ರಮಗಳು :

1) ಸ್ವತ್ತು ಖರೀದಿ ಸಮಯದಲ್ಲಿ ಆಯಾ ಪ್ರದೇಶಕ್ಕೆ ಸೂಕ್ತವಾದ ತಳಿಯನ್ನು ಖರೀದಿಗೆ ಆದ್ಯತೆ ನೀಡುವುದು.
2) ವಿವಿಧ ಯೋಜನೆಗಳಲ್ಲಿ ಬರುವ ಘಟಕದಲ್ಲಿರುವಂತೆ ರಾಸುಗಳನ್ನು ಖರೀದಿಸಿ, ಮೂರು ವರ್ಷದ ವಿಮೆ ಕಡ್ಡಾಯವಾಗಿ ಮಾಡಿಸುವುದು.
3) **ಸ್ವತ್ತು ಖರೀದಿ ಮಾಡುವಾಗ** : ತುಂಬು ಗರ್ಭದಿಂದಿರುವ ಅಥವಾ ಇತ್ತೀಚೆಗೆ ಕರು ಹಾಕಿದ (Recently Calved) ದಿನಕ್ಕೆ 08 ರಿಂದ 10 ಲೀಟರ್ ಹಾಲು ನೀಡುವ ಸಾಮರ್ಥ್ಯ ಇರುವ ಮಿಶ್ರ ತಳಿ ಹಸು ಅಥವಾ ಇತ್ತೀಚೆಗೆ ಕರು ಹಾಕಿದ / ತುಂಬು ಗರ್ಭದ ದಿನಕ್ಕೆ 05 ರಿಂದ 06 ಲೀಟರ್ ಹಾಲು ನೀಡುವ ಸಾಮರ್ಥ್ಯ ಇರುವ ಒಂದು ಸುಧಾರಿತ ಎಮ್ಮೆ ಖರೀದಿ ಮಾಡುವುದು.
4) ಹೈನುಗಾರಿಕೆ ಯೋಜನೆಯಡಿಯಲ್ಲಿ ಖರೀದಿ ಸಮಿತಿಯ ವಿವೇಚನೆಗೆ ಒಳಪಟ್ಟು ರಾಸುಗಳನ್ನು ಹೊರ ಜಿಲ್ಲೆ / ಹೊರ ರಾಜ್ಯಗಳಿಂದ ಖರೀದಿಸಬಹುದಾಗಿದೆ.
5) ಮಿಶ್ರ ತಳಿ ಹಸು / ಸುಧಾರಿತ ಎಮ್ಮೆ / ರಾಸುಗಳನ್ನು ಖರೀದಿ ಸ್ಥಳದಿಂದ ಫಲಾನುಭವಿಯ ಕೊಟ್ಟಿಗೆಯವರೆಗೆ ಸಾಗಾಣಿಕೆ ಮಾಡಲು ಭರಿಸುವ ವೆಚ್ಚವನ್ನು ಯೋಜನಾ ವೆಚ್ಚದಿಂದಲೇ ನೀಡುವುದು.
6) ಖರೀದಿಸಿದ ರಾಸುಗಳಿಗೆ 12 ಅಂಕಿಯ ಪಶು ಆಧಾರ್ ಸಂಖ್ಯೆಯನ್ನು ಕಡ್ಡಾಯವಾಗಿ INAPH ತಂತ್ರಾಂಶದಲ್ಲಿ ನಮೂದಿಸುವುದು ಹಾಗೂ ಖರೀದಿಸಿದ ರಾಸುಗಳಿಂದ ಜನ್ಮ ತಾಳುವ ಕರುಗಳ ಮಾಹಿತಿಯನ್ನು INAPH ತಂತ್ರಾಂಶದಲ್ಲಿ ನಮೂದಿಸುವುದು.
7) ಆರ್.ಕೆ.ವಿ.ವೈ ಯೋಜನೆಯಡಿ ಮುಖ್ಯ ಮಂತ್ರಿಗಳ ಅಮೃತ ಜೀವನ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳ ವಿವರವನ್ನು **"RKVY-BHUVAN mobile app** ಮುಖಾಂತರ Geo-tagging ಮಾಡುವುದು ಕಡ್ಡಾಯವಾಗಿದೆ.
8) ಅನುಬಂಧ-3 ರಂತೆ ಫಲಾನುಭವಿಗಳ ಮಾಹಿತಿಯನ್ನು ಜಿಲ್ಲಾ ಉಪ ನಿರ್ದೇಶಕರು ತಮ್ಮ ವ್ಯಾಪ್ತಿಯ ತಾಲ್ಲೂಕುಗಳ ಫಲಾನುಭವಿಗಳ ಮಾಹಿತಿಯನ್ನು ಕ್ರೋಢೀಕರಿಸಿ ಕೇಂದ್ರ ಕಛೇರಿಗೆ ಸಲ್ಲಿಸುವುದು.

--7

## XIII. ಅನುಷ್ಠಾನಗೊಳಿಸಬಹುದಾದ ಘಟಕ ವಿವರ

| ಕ್ರಸಂ | ಘಟಕದ ವಿವರ | ಘಟಕದ ಮೊತ್ತ | ಸಹಾಯಧನ | |
|---|---|---|---|---|
| | | | ಪರಿಶಿಷ್ಟ ಜಾತಿ/ ಪಂಗಡ (ಶೇ: 33.33) | ಸಾಮಾನ್ಯ (ಶೇ: 25%) |
| 1. | **ಹೈನುಗಾರಿಕೆ ಘಟಕ**<br>ಒಂದು ಮಿಶ್ರ ತಳಿ ಹಾಲು ಕರೆಯುವ ಹಸು (HF/JR cross) | 62,000 | 20,665/- | 15,500/- |
| | ಘಟಕದ ಸಹಾಯಧನ ಹೊರತುಪಡಿಸಿದಂತೆ ಉಳಿದ ಮೊತ್ತವನ್ನು ಫಲಾನುಭವಿಗಳ ವಂತಿಕೆ ಅಥವಾ ಸಾಲದ ರೂಪದಲ್ಲಿ ಬ್ಯಾಂಕಿನಿಂದ ಪಡೆಯುವುದು | | | |

| ಕ್ರಸಂ | ವಿವರ | ಮೊತ್ತ ರೂಗಳಲ್ಲಿ |
|---|---|---|
| 1. | ಒಂದು ಮಿಶ್ರ ತಳಿ ಹಾಲು ಕರೆಯುವ ಹಸು (HF/JR cross) (08-10ಲೀ) ಖರೀದಿಗೆ (ಗರಿಷ್ಠ ಮೊತ್ತ) | 54,000 |
| | ಅ) ಜಾನುವಾರು ವಿಮೆ ಮೊತ್ತ (ಮೂರು ವರ್ಷಕ್ಕೆ) | 2,500 |
| | ಆ) ಸಾಗಾಣಿಕೆ ವೆಚ್ಚ (ಗರಿಷ್ಠ) ಮತ್ತು ಇತರೆ | 2,500 |
| | ಇ) ಪಶು ಆಹಾರ ಮತ್ತು ಲವಣ ಮಿಶ್ರಣ ವೆಚ್ಚ | 3,000 |
| | **ಒಟ್ಟು ಮೊತ್ತ** | **62,000** |

(ಬಿ.ಎನ್. ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ)

ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 121 ಪಪಾಯೋ 2021
ಬೆಂಗಳೂರು ದಿನಾಂಕ:14.09.2021 ಕ್ಕೆ ಅನುಬಂಧ-2

| ಮುಖ್ಯ ಮಂತ್ರಿಗಳ ಅಮೃತ ಜೀವನ ಯೋಜನೆಯ ಜಿಲ್ಲಾವಾರು ಗುರಿಗಳು | | | | | | | | |
|---|---|---|---|---|---|---|---|---|
| Sl No | Name of the District | No of Taluks | Other Physical Target | Other Financial Target | SC Phy Target | SCSP Financial Target (in Rs) | TSP Phy Target | TSP Financial Target (in Rs) |
| 1 | Bengaluru Urban | 4 | 37 | 5,73,500 | 8 | 165320 | 1 | 20665 |
| 2 | Bengaluru (R) | 4 | 42 | 6,51,000 | 8 | 165320 | 2 | 41330 |
| 3 | Ramanagar | 4 | 50 | 7,75,000 | 8 | 165320 | 1 | 20665 |
| 4 | Tumkur | 10 | 114 | 17,67,000 | 19 | 392635 | 6 | 123990 |
| 5 | Chitradurga | 6 | 56 | 8,68,000 | 15 | 309975 | 9 | 185985 |
| 6 | Kolar | 5 | 57 | 8,83,500 | 18 | 371970 | 2 | 41330 |
| 7 | Chikkaballapur | 6 | 46 | 7,13,000 | 12 | 247980 | 5 | 103325 |
| 8 | Davanagere | 6 | 77 | 11,93,500 | 15 | 309975 | 7 | 144655 |
| 9 | Shimoga | 7 | 80 | 12,40,000 | 12 | 247980 | 2 | 41330 |
| 10 | Mysore | 7 | 123 | 19,06,500 | 21 | 433965 | 10 | 206650 |
| 11 | Mandya | 7 | 88 | 13,64,000 | 10 | 206650 | 1 | 20665 |
| 12 | Chamarajnagar | 4 | 37 | 5,73,500 | 10 | 206650 | 3 | 61995 |
| 13 | Chikkamagaluru | 7 | 49 | 7,59,500 | 10 | 206650 | 1 | 20665 |
| 14 | Hassan | 8 | 81 | 12,55,500 | 13 | 268645 | 1 | 20665 |
| 15 | Dakshina Kannada | 5 | 108 | 16,74,000 | 6 | 123990 | 2 | 41330 |
| 16 | Udupi | 3 | 61 | 9,45,500 | 3 | 61995 | 2 | 41330 |
| 17 | Kodagu | 3 | 25 | 3,87,500 | 3 | 61995 | 2 | 41330 |
| 18 | Belagavi | 10 | 226 | 35,03,000 | 22 | 454630 | 9 | 185985 |
| 19 | Uttara Kannada | 11 | 75 | 11,62,500 | 4 | 82660 | 1 | 20665 |
| 20 | Haveri | 7 | 72 | 11,16,000 | 8 | 165320 | 4 | 82660 |
| 21 | Dharwad | 5 | 92 | 14,26,000 | 7 | 144655 | 3 | 61995 |
| 22 | Gadag | 5 | 48 | 7,44,000 | 7 | 144655 | 2 | 41330 |
| 23 | Vijayapura | 5 | 98 | 15,19,000 | 17 | 351305 | 1 | 20665 |
| 24 | Bagalkote | 6 | 85 | 13,17,500 | 12 | 247980 | 3 | 61995 |
| 25 | Kalburgi | 7 | 107 | 16,58,500 | 25 | 516625 | 2 | 41330 |

-2

| | | | | | | | | |
|---|---|---|---|---|---|---|---|---|
| 26 | Bellary | 7 | 86 | 13,33,000 | 20 | 413300 | 13 | 268645 |
| 27 | Raichur | 5 | 67 | 10,38,500 | 15 | 309975 | 11 | 227315 |
| 28 | Koppal | 4 | 56 | 8,68,000 | 10 | 206650 | 5 | 103325 |
| 29 | Bidar | 5 | 61 | 9,45,500 | 16 | 330640 | 3 | 61995 |
| 30 | Yadagiri | 3 | 44 | 6,82,000 | 10 | 206650 | 4 | 82660 |
| | **Total** | **176** | **2,248** | **348,44,000** | **364** | **7522060** | **118** | **2438470** |

(ಬಿ.ಎನ್. ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ)

## ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 121 ಪಪಾಯೋ 2021
## ಬೆಂಗಳೂರು ದಿನಾಂಕ:14.09.2021 ಕ್ಕೆ ಅನುಬಂಧ-3

### ಮುಖ್ಯ ಮಂತ್ರಿಗಳ ಅಮೃತ ಜೀವನ ಯೋಜನೆಯ ಫಲಾನುಭವಿಗಳ ವಿವರಣಾ ಪಟ್ಟಿ

| ಜಿಲ್ಲೆಯ ಹೆಸರು | | ತಾಲ್ಲೂಕು | | ವಿಧಾನಸಭಾ ಕ್ಷೇತ್ರ | | ಘಟಕ | | | | | |
|---|---|---|---|---|---|---|---|---|---|---|---|
| ಕ್ರ ಸಂ | ಫಲಾನು ಭವಿಯ ಹೆಸರು | ತಂದೆಯ/ ಗಂಡನ ಹೆಸರು | ಗ್ರಾಮ | ಫಲಾನು ಭವಿಯ ಮೊಬೈಲ್ ಸಂಖ್ಯೆ | ಫಲಾನು ಭವಿಯ ಆದಾರ್ ಸಂಖ್ಯೆ | ವರ್ಗ | | | | ವಿಕಲ ಚೇತ ರು | ಸಾಲ ಮಂಜೂರು ಮಾಡಿದ ಬ್ಯಾಂಕ್ ವಿವರ |
| | | | | | | ಸಾಮಾನ್ಯ | ಪ.ಜಾ | ಪ.ಪಂ | ಅಲ್ಪ ಸಂಖ್ಯಾತ ರು | | |
| | | | | | | | | | | | |
| | | | | | | | | | | | |

(ಬಿ.ಎನ್. ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ)

ಸಂಖ್ಯೆ: ಆಪಸಂ/ಆರ್.ಕೆ.ವಿ.ವೈ/ ವಿವ-07/2021-22 ದಿನಾಂಕ: 15-09-2021

## ಹಿಂಬರಹ

ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 121 ಪಪಾಯೋ 2021 ಬೆಂಗಳೂರು ದಿನಾಂಕ: 14-09-2021 ವನ್ನು ಕಳುಹಿಸಿ ಕೊಡುತ್ತಾ, ಸದರಿ ಆದೇಶದಲ್ಲಿ, 2021-22ನೇ ಸಾಲಿನಲ್ಲಿ ಮುಖ್ಯಮಂತ್ರಿಗಳ ಅಮೃತ ಜೀವನ ಯೋಜನೆ ಮಾರ್ಗಸೂಚಿಯಂತೆ ಅನುಷ್ಠಾನಗೊಳಿಸಲು ಸೂಕ್ತ ಕ್ರಮ ವಹಿಸಲು ಸೂಚಿಸಿದೆ.

ಅಪರ ನಿರ್ದೇಶಕರು

(ವಿಸ್ತರಣೆ, ತರಬೇತಿ, ಶಿಕ್ಷಣ ಮತ್ತು ಆರ್.ಕೆ.ವಿ.ವೈ)

ಪ್ರತಿಯನ್ನು

1. ಉಪ ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಎಲ್ಲಾ 30 ಜಿಲ್ಲೆ ರವರಿಗೆ ಮಾಹಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಉಪ ನಿರ್ದೇಶಕರು, ಇ-ಆಡಳಿತ ರವರಿಗೆ ಕಳುಹಿಸುತ್ತಾ ಸದರಿ ಆದೇಶವನ್ನು ಇಲಾಖಾ ಜಾಲತಾಣಕ್ಕೆ ಅಪ್ ಲೋಡ್ ಮಾಡಲು ಕೋರಿದೆ.
3. ಕಂಟ್ರೋಲ್ ರೂಂ-ಕಂ-24/7 ಹೆಲ್ಪ್ ಲೈನ್ (ಸಹಾಯವಾಣಿ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಪಶುಪಾಲನಾ ಭವನ, ಹೆಬ್ಬಾಳ, ಬೆಂಗಳೂರು.

# ಅನುಬಂಧ-3

| ಪಶುಭಾಗ್ಯ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ | | | |
|---|---|---|---|
| Sl.No. | Name of the District | 2015-16 | 2016-17 |
| 1 | Bagalkot | 424 | 679 |
| 2 | Belagavi | 811 | 1217 |
| 3 | Bellary | 686 | 924 |
| 4 | Bengaluru Rural | 258 | 489 |
| 5 | Bengaluru Urban | 269 | 615 |
| 6 | Bidar | 546 | 660 |
| 7 | Vijayapura | 631 | 745 |
| 8 | Chamarajanagar | 478 | 561 |
| 9 | Chikballapur | 558 | 746 |
| 10 | Chikkamagaluru | 522 | 753 |
| 11 | Chitradurga | 551 | 717 |
| 12 | Dakshina Kannada | 244 | 536 |
| 13 | Davanagere | 639 | 794 |
| 14 | Dharwad | 371 | 575 |
| 15 | Gadag | 342 | 555 |
| 16 | Kalaburagi | 1052 | 1079 |
| 17 | Hassan | 583 | 1314 |
| 18 | Haveri | 526 | 818 |
| 19 | Kodagu | 205 | 321 |
| 20 | Kolar | 408 | 600 |
| 21 | Koppal | 507 | 591 |
| 22 | Mandya | 697 | 800 |
| 23 | Mysuru | 608 | 919 |
| 24 | Raichur | 572 | 591 |
| 25 | Ramanagara | 364 | 520 |
| 26 | Shivamogga | 496 | 789 |
| 27 | Tumakuru | 1288 | 1217 |
| 28 | Udupi | 99 | 278 |
| 29 | Uttara Kannada | 576 | 1161 |
| 30 | Yadgir | 437 | 510 |
| | **Total** | **15748** | **22074** |

| ಪಶುಭಾಗ್ಯ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ | | | | | |
|---|---|---|---|---|---|
| Sl No | Name of the District | 2017-18 | 2018-19 | 2021-22 | 2022-23 |
| 1 | Bengaluru Urban | 910 | 49 | 39 | 49 |
| 2 | Bengaluru (R) | 660 | 108 | 44 | 58 |
| 3 | Ramanagar | 676 | 81 | 49 | 64 |
| 4 | Tumkur | 1513 | 142 | 115 | 155 |
| 5 | Chitradurga | 855 | 170 | 69 | 90 |
| 6 | Kolar | 815 | 155 | 66 | 86 |
| 7 | Chikkaballapur | 775 | 99 | 54 | 71 |
| 8 | Davanagere | 935 | 112 | 83 | 110 |
| 9 | Shimoga | 888 | 73 | 78 | 97 |
| 10 | Mysore | 1609 | 193 | 130 | 171 |
| 11 | Mandya | 1015 | 68 | 81 | 109 |
| 12 | Chamarajnagar | 604 | 84 | 43 | 57 |
| 13 | Chikkamagaluru | 839 | 63 | 50 | 66 |
| 14 | Hassan | 1303 | 84 | 79 | 105 |
| 15 | Dakshina Kannada | 604 | 65 | 94 | 127 |
| 16 | Udupi | 382 | 23 | 54 | 72 |
| 17 | Kodagu | 363 | 27 | 25 | 32 |
| 18 | Belagavi | 1419 | 175 | 213 | 245 |
| 19 | Uttara Kannada | 1218 | 30 | 65 | 88 |
| 20 | Haveri | 925 | 67 | 70 | 94 |
| 21 | Dharwad | 670 | 54 | 84 | 111 |
| 22.0 | Gadag | 645 | 49 | 47 | 63 |
| 23 | Vijayapura | 786 | 77 | 97 | 128 |
| 24 | Bagalkote | 756 | 84 | 83 | 111 |
| 25 | Kalburgi | 1075 | 138 | 113 | 148 |
| 26 | Bellary | 1091 | 204 | 102 | 134 |
| 27 | Raichur | 840 | 222 | 80 | 105 |
| 28 | Koppal | 595 | 128 | 60 | 80 |
| 29 | Bidar | 851 | 154 | 169 | 93 |
| 30 | Yadagiri | 536 | 120 | 49 | 66 |
| | **Total** | **26153** | **3098** | **2385** | **2985** |

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 893ಕ್ಕೆ ಅನುಬಂಧ -4

ಹಿಪ್ಪುನೇರಳೆ ವಿಸ್ತೀರ್ಣ (ಹೆಕ್ಟೇರ್)

| ಕ್ರ. ಸಂ | ಜಿಲ್ಲೆ | 2018-19 | 2019-20 | 2020-21 | 2021-22 | 2022-23 | 2023-24 (ಡಿಸೆಂಬರ್ 2023ರ ಅಂತ್ಯಕ್ಕೆ) |
|---|---|---|---|---|---|---|---|
| 1 | ಬೆಂಗಳೂರು ಗ್ರಾಮಾಂತರ | 6944.60 | 7032.09 | 6289.72 | 5501.49 | 5169.93 | 5421.40 |
| 2 | ಬೆಂಗಳೂರು ನಗರ | 1043.35 | 1066.75 | 1091.46 | 1128.06 | 1202.77 | 1245.23 |
| 3 | ಚಿಕ್ಕಬಳ್ಳಾಪುರ | 19896.95 | 20666.13 | 21443.05 | 21322.98 | 20544.62 | 21074.11 |
| 4 | ಚಿತ್ರದುರ್ಗ | 1827.11 | 1979.19 | 2119.55 | 2239.28 | 2607.05 | 2832.26 |
| 5 | ದಾವಣಗೆರೆ | 653.45 | 285.05 | 301.38 | 318.23 | 345.96 | 392.76 |
| 6 | ಕೋಲಾರ | 19992.11 | 19616.74 | 19329.06 | 19249.81 | 19907.79 | 19797.77 |
| 7 | ರಾಮನಗರ | 18381.10 | 18974.30 | 19446.35 | 20103.63 | 20804.56 | 21306.65 |
| 8 | ಶಿವಮೊಗ್ಗ | 243.57 | 230.57 | 203.70 | 210.10 | 241.39 | 265.00 |
| 9 | ತುಮಕೂರು | 3779.62 | 3956.99 | 4022.22 | 4223.06 | 4859.28 | 5554.85 |
| 10 | ಚಾಮರಾಜನಗರ | 1222.18 | 1263.27 | 1321.72 | 1117.30 | 1201.34 | 1311.59 |
| 11 | ಚಿಕ್ಕಮಗಳೂರು | 70.36 | 75.75 | 97.00 | 101.15 | 108.23 | 117.52 |
| 12 | ದಕ್ಷಿಣ ಕನ್ನಡ | 17.30 | 18.70 | 18.60 | 15.00 | 10.86 | 10.86 |
| 13 | ಹಾಸನ | 1579.38 | 1660.45 | 1712.81 | 1801.69 | 1954.44 | 2095.58 |
| 14 | ಕೊಡಗು | 13.20 | 15.20 | 11.00 | 13.00 | 13.00 | 13.80 |
| 15 | ಮಂಡ್ಯ | 15985.79 | 16462.63 | 16922.82 | 17333.43 | 17944.43 | 18378.02 |
| 16 | ಮೈಸೂರು | 1905.00 | 2005.43 | 2007.43 | 2028.96 | 2258.98 | 2389.22 |
| 17 | ಉಡುಪಿ | 26.76 | 28.36 | 26.46 | 23.66 | 17.86 | 18.16 |
| 18 | ಬಳ್ಳಾರಿ | 1655.40 | 2100.00 | 2149.30 | 2201.90 | 2750.61 | 3149.71 |
| 19 | ಬೀದರ್ | 508.70 | 394.70 | 383.30 | 388.26 | 441.66 | 481.36 |
| 20 | ಕಲಬುರ್ಗಿ | 817.27 | 639.99 | 782.69 | 684.28 | 854.78 | 982.18 |
| 21 | ಕೊಪ್ಪಳ | 407.84 | 414.09 | 424.59 | 465.04 | 608.64 | 658.38 |
| 22 | ರಾಯಚೂರು | 642.38 | 664.18 | 663.00 | 711.09 | 849.12 | 936.72 |
| 23 | ಯಾದಗಿರಿ | 245.97 | 191.17 | 226.99 | 222.99 | 271.79 | 205.79 |
| 24 | ಬಾಗಲಕೋಟೆ | 705.98 | 687.66 | 691.01 | 696.01 | 818.43 | 960.30 |
| 25 | ಬೆಳಗಾವಿ | 1020.80 | 1049.76 | 1058.74 | 977.90 | 1113.14 | 1189.84 |
| 26 | ವಿಜಯಪುರ | 615.35 | 532.20 | 593.98 | 666.58 | 839.88 | 948.73 |
| 27 | ಧಾರವಾಡ | 226.10 | 212.50 | 193.30 | 155.90 | 194.30 | 222.90 |
| 28 | ಗದಗ | 640.56 | 615.09 | 606.13 | 604.29 | 720.94 | 840.38 |
| 29 | ಹಾವೇರಿ | 2144.81 | 2150.90 | 1959.32 | 2142.62 | 2613.73 | 2976.78 |
| 30 | ಉತ್ತರ ಕನ್ನಡ | 163.30 | 185.70 | 209.40 | 218.50 | 230.50 | 215.56 |
| 31 | ಮೈಸೂರು ಬಿತ್ತನೆ ವಲಯ | 1201.27 | 1208.76 | 1165.64 | 1152.32 | 1158.18 | 1164.81 |
| | ಒಟ್ಟು | 104577.56 | 106384.30 | 107471.72 | 108018.51 | 112658.19 | 117158.22 |